No.TS/4/2020-Title (RNI)

**Office of Registrar of Newspapers for India**

(M/o Information & Broadcasting)

9th Floor, Soochna Bhawan, CGO Complex,

Lodhi Road, New Delhi-110003.

Dated 08/09/2020

# NOTICE TO PUBLISHERS

**Subject: Title Verification Guidelines reg.**

The Title verification guidelines as amended on 08.09.2020 by the competent authority is attached. Following may kindly be noted:

(i) The amended guidelines will be effective from today (i.e. 08.09.2020), except for (ii) below

(ii) The *Clause 16(a)* of the guidelines shall be effective from 01st January 2021 or, if notified otherwise

(iii) The guidelines are now made available in Urdu, Gujarati, Marathi, Bengali, Odia, Assamese, Kannada, Telugu, Malayalam and Tamil languages, in addition to Hindi and English.

(Joyce Philip)

Asst. Press Registrar

ಸಂಖ್ಯೆ. *TS/4/2020-Title (RNI)*
ಭಾರತ ಸರ್ಕಾರ
ಭಾರತೀಯ ಪತ್ರಿಕಾ ನೋಂದಣಾಧಿಕಾರಿಗಳ ಕಚೇರಿ
(ವಾರ್ತಾ ಮತ್ತು ಪ್ರಸಾರ ಸಚಿವಾಲಯ)
9ನೇ ಮಹಡಿ, ಸೂಚನಾ ಭವನ, ಸಿಜಿಒ ಕಾಂಪ್ಲೆಕ್ಸ್
ಲೋಧಿ ರಸ್ತೆ, ನವದೆಹಲಿ - 110003
******

**ದಿನಾಂಕ: 08th September 2020**

## ಪತ್ರಿಕೆಗಳ ಶಿರೋನಾಮೆಗಳ ಪ್ರಮಾಣೀಕರಣ ಕುರಿತ ಮಾರ್ಗಸೂಚಿ

(1) ಪತ್ರಿಕೆ ಮತ್ತು ಪುಸಕ್ತಗಳ ನೋಂದಣಿ ಕಾಯ್ದೆ 1867ರ ಅನ್ವಯ ಪತ್ರಿಕೆಗಳ ನೋಂದಣಿಗೆ ಅವಕಾಶವಿದ್ದು, ಅದನ್ನು "ಸಾರ್ವಜನಿಕ ಸುದ್ದಿ ಅಥವಾ ಸಾರ್ವಜನಿಕ ಸುದ್ದಿ ಕುರಿತ ಟೀಕೆಗಳನ್ನೊಳಗೊಂಡ ಯಾವುದೇ ಮುದ್ರಿತ ನಿಯತಕಾಲಿಕೆಯ ಕೆಲಸ" ಹೀಗೆ ವ್ಯಾಖ್ಯಾನಿಸಲಾಗಿದೆ.

(2) ಯಾವುದೇ ವ್ಯಕ್ತಿ ಪತ್ರಿಕೆಯನ್ನು ಮುದ್ರಿಸಲು ಬಯಸಿದರೆ ಆತ ನಿರ್ದಿಷ್ಟ ಪ್ರಾಧಿಕಾರದ ಮುಂದೆ ಪತ್ರಿಕೆಯ ಉದ್ದೇಶಿತ ಶಿರೋನಾಮೆ(ಟೈಟಲ್)ಗಳ ಸಹಿತ ಘೋಷಣೆ ಸಲ್ಲಿಸಬೇಕು. ನಿರ್ದಿಷ್ಟ ಪ್ರಾಧಿಕಾರ ಆ ಘೋಷಣೆಯನ್ನು ಪರಿಶೀಲಿಸಿ, ಉದ್ದೇಶಿತ ಶಿರೋನಾಮೆ ನೋಂದಣಿಯಾಗಿಲ್ಲ ಎಂದು ಪ್ರತಿಕಾ ನೋಂದಣಾಧಿಕಾರಿಯಿಂದ ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಂಡು ನಂತರ ಅಧಿಕೃತ ಅನುಮೋದನೆ ನೀಡಲಿದೆ.
ಎ) ಒಂದೇ ಬಗೆಯ ಅಥವಾ ಆ ರಾಜ್ಯದಲ್ಲಿ ಯಾವುದೇ ಭಾಷೆಯ ಅಥವಾ
ಬಿ) ಅದೇ ಅಥವಾ ಅಂತಹುದೇ ಬಗೆಯ ಶಿರೋನಾಮೆ ಇಡೀ ಭಾರತದಲ್ಲಿ ಬೇರೊಂದು ಭಾಷೆಯಲ್ಲಿ ಇದೆಯೇ.

(3) ಶಿರೋನಾಮೆ ಪ್ರಮಾಣೀಕರಣಕ್ಕೆ ಅರ್ಜಿ ಸಲ್ಲಿಸುವ ಮುನ್ನ ಅರ್ಜಿದಾರರು ಆರ್ ಎನ್ ಐ ವೆಬ್ ಸೈಟ್ ನ ಮುಖ್ಯಪುಟದಲ್ಲಿ ಲಭ್ಯವಿರುವ

ಪ್ರಮಾಣೀಕೃತ ಶೀರ್ಷಿಕೆಗಳು/ಟೈಟಲ್ ಸರ್ಚ್ ನಲ್ಲಿ (**Verified Titles/Title Search' Menu on RNI website)** ಲಭ್ಯವಿರುವ ಪ್ರಮಾಣೀಕೃತ ಶಿರೋನಾಮೆಗಳು ಅಥವಾ ಟೈಟಲ್ ಗಳ ಪಟ್ಟಿಯನ್ನು ಪರಿಶೀಲಿಸುವುದು ಮತ್ತು ಉದ್ದೇಶಿತ ಶಿರೋನಾಮೆಗಳು ಅದೇ ಬಗೆಯದಾಗಿರುವುದಿಲ್ಲ ಅಥವಾ ಆರ್ ಎನ್ ಐನಲ್ಲಿ ಈಗಾಗಲೇ ನೋಂದಣಿಯಾಗಿರುವ ಹೆಸರುಗಳ ಪಟ್ಟಿಯಲ್ಲಿ ಇಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಆರ್ ಎನ್ ಐ ವೆಬ್ ಸೈಟ್ ನಲ್ಲಿ ಲಭ್ಯವಿರುವ ಶಿರೋನಾಮೆಗಳು ಈಗಾಗಲೇ ಪ್ರಮಾಣೀಕರಿಸಲ್ಪಟ್ಟಿರುವಂತಹವು. ಆದರೆ ಪಟ್ಟಿಯಲ್ಲಿ ಇಲ್ಲದಿರುವ ಶಿರೋನಾಮೆಗಳು ಲಭ್ಯವಿದೆ ಎಂದು ತಿಳಿಯಬೇಕಾಗಿಲ್ಲ. ಶಿರೋನಾಮೆಗಳ ಅಂತಿಮ ಅನುಮೋದನೆ ಅಥವಾ ತಿರಸ್ಕರಿಸುವ ಅಂತಿಮ ಅಧಿಕಾರ ಪತ್ರಿಕಾ ನೋಂದಣಾಧಿಕಾರಿ ಅವರಿಗಿರುತ್ತದೆ.

(4) ಪತ್ರಿಕೆ/ನಿಯತ ಕಾಲಿಕಗಳ ಶಿರೋನಾಮೆಗಳ ಪ್ರಮಾಣೀಕರಣಕ್ಕೆ ಆನ್ ಲೈನ್ ಪದ್ಧತಿ ಮೂಲಕ ಮಾತ್ರವೇ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿ ನಮೂನೆಗಳು ಆರ್ ಎನ್ ಐ ವೆಬ್ ಸೈಟ್ ಅಂದರೆ http//www.rni.nic.in. ನಲ್ಲಿ ಲಭ್ಯವಿವೆ.(ನಿರ್ದಿಷ್ಟ ದಾಖಲೆಗಳನ್ನು ಲಗತ್ತಿಸಬೇಕು) ಅರ್ಜಿ ನಮೂನೆಯ ಮುದ್ರಿತ ಪ್ರತಿಯನ್ನು ನಿರ್ದಿಷ್ಟ ಪ್ರಾಧಿಕಾರ(ಜಿಲ್ಲಾ ಮ್ಯಾಜಿಸ್ಟ್ರೇಟ್/ಜಿಲ್ಲೆಯ ಸಂಬಂಧಿಸಿದ ಕಾರ್ಯಕಾರಿ ಮ್ಯಾಜಿಸ್ಟ್ರೇಟ್) ಮೂಲಕ ಆರ್ ಎನ್ ಐಗೆ ಕಳುಹಿಸಬೇಕು.

(5) ಶಿರೋನಾಮೆಗೆ ಸಲ್ಲಿಸಿರುವ ಅರ್ಜಿಯ ಪ್ರತಿಯೊಂದು ಪುಟದಲ್ಲೂ, ಅರ್ಜಿಯನ್ನು ಶಿಫಾರಸು ಮಾಡುವ ನಿರ್ದಿಷ್ಟ ಪ್ರಾಧಿಕಾರದ ಸ್ಪಷ್ಟ ಹಾಗೂ ಅಚ್ಚುಕಟ್ಟಾದ ಸಹಿ ಹಾಗೂ ಮೊಹರು ಒಳಗೊಂಡಿರಬೇಕು.

(6) ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ನಿರ್ದಿಷ್ಟ ಪ್ರಾಧಿಕಾರದ ಮೂಲಕ ಬರುವ ಅರ್ಜಿಯ ಅಸಲಿ ಪ್ರತಿಯನ್ನು ಮಾತ್ರ ಶಿರೋನಾಮೆ ಪ್ರಮಾಣೀಕರಣ ಪ್ರಕ್ರಿಯೆಯನ್ನು ಆರ್.ಎನ್.ಐ., ನಡೆಸಲಿದೆ. ನಕಲು ಪ್ರತಿಗಳನ್ನು ಯಾವುದೇ ಕಾರಣಕ್ಕೂ ಮಾನ್ಯ ಮಾಡುವುದಿಲ್ಲ. ಶಿರೋನಾಮೆ ಅರ್ಜಿಯಲ್ಲಿ ತಿದ್ದುವುದು ಅಥವಾ ಮತ್ತೆ ಬರೆಯುವುದು ಅಥವಾ ವೈಟ್ನರ್ ಬಳಸಿದ್ದರೆ ಅಂತಹ ಅರ್ಜಿಗಳನ್ನು ಮಾನ್ಯ ಮಾಡುವುದಿಲ್ಲ.

(7) ಒಂದು ವೇಳೆ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಉಲ್ಲೇಖಿಸಿದರೆ ಅರ್ಜಿಯನ್ನು ದ್ವಿಭಾಷಾ ಅಥವಾ ಬಹುಭಾಷಾ ಪತ್ರಿಕೆಗಾಗಿ ಅರ್ಜಿ ಎಂದು ಪರಿಗಣಿಸಲಾಗುವುದು ಮತ್ತು ಅದರಂತೆ ಪ್ರಮಾಣೀಕರಣ ನಡೆಸಲಾಗುವುದು.

(8) ಪತ್ರಿಕೆ ಅಥವಾ ಪ್ರಕಾಶನ ಒಂದು ಭಾಷೆಯಲ್ಲಿ ಅಥವಾ ದ್ವಿಭಾಷೆಯಲ್ಲಿ ಅಥವಾ ಬಹುಭಾಷೆಯಲ್ಲಿ ಇರಬಹುದು. ಪ್ರಕಾಶನ ದ್ವಿಭಾಷೆ ಅಥವಾ ಬಹುಭಾಷೆಯಲ್ಲಿ ಇದ್ದರೆ ಅದರಲ್ಲಿ ಶಿರೋನಾಮೆ ಪಡೆಯುವಾಗ ಪ್ರಮಾಣೀಕರಿಸಿರುವ ಎಲ್ಲ ಭಾಷೆಗಳ ಸುದ್ದಿ/ಲೇಖನಗಳು ಒಳಗೊಂಡಿರಬೇಕು. ಬೇರೆ ಬೇರೆ ಭಾಷೆಗಳಿಗೆ ಪ್ರತ್ಯೇಕ ಪ್ರಕಾಶನಗಳನ್ನು ನಡೆಸುವುದಾದರೆ ಪ್ರತಿಯೊಂದು ಪ್ರಕಾಶನಕ್ಕೂ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಬೇಕು.

(9) ಒಂದು ವೇಳೆ ಹಾಲಿ ಇರುವ ಪ್ರಕಾಶನ ಸಂಸ್ಥೆ ಅದೇ ರಾಜ್ಯದ ಮತ್ತೊಂದು ಜಿಲ್ಲೆಯಿಂದ ಅಥವಾ ಅದೇ ಭಾಷೆಯಲ್ಲಿ ಹೊಸ ಆವೃತಿ ತರುವುದಾದರೆ ಪ್ರಕಾಶನ ಮಾಡುವುದಾದರೆ ಅಂತಹ ಸಂದರ್ಭದಲ್ಲಿ ಮತ್ತೆ ಶಿರೋನಾಮೆ ಪ್ರಮಾಣೀಕರಣ ಅಗತ್ಯವಿಲ್ಲ. ಪ್ರಕಾಶಕರು ನೇರವಾಗಿ ನೋಂದಣಿ ಸಂಖ್ಯೆ ಮತ್ತು ಪ್ರಮಾಣಪತ್ರ ವಿತರಣೆಗೆ ಆರ್ ಎನ್ ಐಗೆ ತಮ್ಮ ಅಗತ್ಯ ದಾಖಲೆಗಳನ್ನು ಸಲ್ಲಿಸಬಹುದು. ಆದರೆ ಉದ್ದೇಶಿತ ಹೊಸ ಆವೃತ್ತಿ ಬೇರೊಂದು ರಾಜ್ಯದಲ್ಲಿ ಅಥವಾ ಬೇರೆ ಭಾಷೆಯಲ್ಲಿ ಆಗಿದ್ದರೆ(ಒಂದೇ ರಾಜ್ಯದೊಳಗೆ ಅಥವಾ ಬೇರೆ ರಾಜ್ಯದಲ್ಲಿ) ಮತ್ತೆ ಶಿರೋನಾಮೆಯ ಪೂರ್ವ ಪ್ರಮಾಣೀಕರಣದ ಅಗತ್ಯವಿದೆ.

(10) ಯಾವುದೇ ಅರ್ಜಿದಾರ ನಿರ್ದಿಷ್ಟ ಭಾಷೆಯಲ್ಲಿ, ರಾಜ್ಯ ಅಥವಾ ನಿಗದಿತ ಅವಧಿಗೆ ಶಿರೋನಾಮೆ ಒಡೆತನ ಹೊಂದಿದ್ದರೆ ಆತನಿಗೆ ಬೇರೊಂದು ಭಾಷೆಯಲ್ಲಿ, ರಾಜ್ಯದಲ್ಲಿ ಅಥವಾ ನಿಯಮಿತ ಅವಧಿಯಲ್ಲಿ ಶಿರೋನಾಮೆ ಕುರಿತ ಮಾಲಿಕತ್ವ ಹೊಂದುವ ಯಾವುದೇ ಸ್ವಾಭಾವಿಕ ಹಕ್ಕಿರುವುದಿಲ್ಲ.

(11) ಮತ್ತೊಂದು ರಾಜ್ಯ, ಭಾಷೆ ಅಥವಾ ನಿಯತ ಅವಧಿಯ ಕುರಿತ ಶಿರೋನಾಮೆಗಳು ಮೊದಲೇ ಒಡೆತನ ಹೊಂದಿದ್ದರೆ ಅಂತಹವುಗಳ ಪ್ರಮಾಣೀಕರಣ ಮಾರ್ಗಸೂಚಿಯಂತೆ ಲಭ್ಯತೆಯನ್ನು ಆಧರಿಸಿರುತ್ತದೆ.

(12) ಆರ್ ಎನ್ ಐ ದಾಖಲೆಗಳಲ್ಲಿ ಈಗಾಗಲೇ ತಮ್ಮ ಹೆಸರಿನ ನೋಂದಾಯಿತ ಪ್ರಕಾಶನಗಳನ್ನು ಹೊಂದಿರುವಂತಹ ಅರ್ಜಿದಾರರು ಹೊಸ ಶಿರೋನಾಮೆಗಳಿಗೆ ಅರ್ಜಿ ಸಲ್ಲಿಸುವ ಮುನ್ನ ಆರ್ ಎನ್ ಐ ಕಚೇರಿಗಳಿಗೆ ತಮ್ಮ ಇತ್ತೀಚಿನ ನೋಂದಾಯಿತ ಪ್ರಕಾಶನದ ವಾರ್ಷಿಕ ರಿಟರ್ನ್ಸ್ ದಾಖಲಿಸಬೇಕು.

(13) ಶಿರೋನಾಮೆ ಪ್ರಮಾಣೀಕರಣ ಅರ್ಜಿ ಅಪೂರ್ಣವಾಗಿದ್ದರೆ ಅದು ತಿರಸ್ಕರಿಸಲು ಅರ್ಹವಾಗಿರುತ್ತದೆ.

(14) ಪತ್ರಿಕಾ ರಿಜಿಸ್ಟ್ರಾರ್ ಶಿರೋನಾಮೆಗಳ ಪ್ರಮಾಣೀಕರಣಕ್ಕೆ ಸಲ್ಲಿಸಿರುವ ಅರ್ಜಿಗಳ ಪರಿಶೀಲನೆಗೆ ಅಳವಡಿಸಿಕೊಂಡಿರುವ ವಿಸ್ತೃತ ಮಾನದಂಡಗಳು ಈ ಕೆಳಗಿನಂತಿವೆ:

ಎ) ರಾಜ್ಯದಲ್ಲಿ ಒಂದೇ ಬಗೆಯ ಅಥವಾ ಒಂದೇ ಶಿರೋನಾಮೆ ಯಾವುದೇ ಭಾಷೆಯಲ್ಲಿದ್ದರೆ ಅಥವಾ ಒಂದೇ ಬಗೆಯ ಒಂದೇ ಭಾಷೆಯ ಇಡೀ ಭಾರತದಲ್ಲಿ ಶಿರೋನಾಮೆ ಇದ್ದರೆ ಪರಿಶೀಲಿಸಲಾಗದು.

ಬಿ) ವೃತ್ತ ಪತ್ರಿಕೆ ಅಥವಾ ನಿಯತಕಾಲಿಕೆಯ ಶಿರೋನಾಮೆಯು ವಿದೇಶಿ ಪತ್ರಿಕೆಯ ಶಿರೋನಾಮೆಗೆ ಸಮನಾಗಿದ್ದರೆ ಅಥವಾ ವಿದೇಶಿ ಪತ್ರಿಕೆಯ ಶಿರೋನಾಮೆಯೇ ಅಗಿದ್ದರೆ ಅದಕ್ಕೆ ಸಂಬಂಧಿಸಿದಂತೆ ವಿದೇಶಿ ಶಿರೋನಾಮೆ ಮಾಲಿಕರ ವಿವರ ಮತ್ತು ಅಧಿಕೃತ ಪರವಾನಗಿ ಒಪ್ಪಂದ ಸಲ್ಲಿಸದೆ ಅವುಗಳನ್ನು ಪರಿಶೀಲಿಸಲಾಗದು.

ಸಿ) ಅರ್ಜಿದಾರರು ತಮಗೆ ಹಿಂದೆ ಹಂಚಿಕೆಯಾದ ಶಿರೋನಾಮೆಗಳನ್ನು ನೋಂದಾಯಿಸಿದ ನಂತರ ಮಾತ್ರ ಅದೇ ಅರ್ಜಿದಾರರು ಮತ್ತೆ ಹೊಸ ಶಿರೋನಾಮೆಗಳಿಗೆ ಅರ್ಜಿ ಸಲ್ಲಿಸಬಹುದು.

ಡಿ) ಅರ್ಜಿದಾರರು ಒಂದೇ ಸಮಯದಲ್ಲಿ ಮೂರಕ್ಕಿಂತ ಹೆಚ್ಚು ಶಿರೋನಾಮೆ ಅರ್ಜಿಗಳನ್ನು ಸಲ್ಲಿಸುವಂತಿಲ್ಲ. ಒಬ್ಬ ಅರ್ಜಿದಾರರಿಂದ 3ಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಲಾಗಿದ್ದರೆ ಅಂತಹ ವೇಳೆ ಕೇವಲ ಮೂರು ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ಉಳಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಇ) ಈ ಕೆಳಗಿನ ಸಂದರ್ಭಗಳನ್ನು ಹೊರತುಪಡಿಸಿದರೆ, ಶಿರೋನಾಮೆ ಅರ್ಜಿಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ಪ್ರಮಾಣೀಕರಿಸಲಾಗುವುದು.

i) ಒಂದು ವೇಳೆ ವಿದೇಶಿ ಶಿರೋನಾಮೆಯಾಗಿದ್ದರೆ ಅಂತಹ ಸಂದರ್ಭದಲ್ಲಿ ಅರ್ಜಿದಾರರು ವಾರ್ತಾ ಮತ್ತು ಪ್ರಸಾರ ಸಚಿವಾಲಯದಿಂದ ನಿರಪೇಕ್ಷಣಾ ಪತ್ರ (ಎನ್‌ಒಸಿ) ಸಲ್ಲಿಸಬೇಕು.

ii) ಒಂದು ವೇಳೆ ನ್ಯಾಯಾಲಯದ ನಿರ್ದೇಶನವಿದ್ದರೆ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರದ ಆದೇಶವಿದ್ದರೆ, ಅದು ಆದೇಶಕ್ಕೆ ಒಳಪಟ್ಟಿರುತ್ತದೆ ಮತ್ತು ಅದನ್ನು ಅಂತಹ ನಿರ್ದೇಶನ ಅಥವಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸದಿರಲು ನಿರ್ಧರಿಸಲಾಗಿದೆ.

iii) ಸಾರ್ವಜನಿಕ ಹಿತಾಸಕ್ತಿ ಮೇರೆಗೆ, ಪತ್ರಿಕಾ ರಿಜಿಸ್ಟ್ರಾರ್ ಅವರ ಅನುಮೋದನೆ ಯೊಂದಿಗೆ ಇರುವ ಯಾವುದೇ ಪ್ರಕರಣಗಳು.

ಎಫ್) ಅರ್ಜಿದಾರರು ಅರ್ಜಿಗಳನ್ನು ಭರ್ತಿ ಮಾಡುವಾಗ ಮಾಡಿರುವ ಕಾಗುಣಿತ ದೋಷಗಳಿಂದ ಶಿರೋನಾಮೆ ತಿರಸ್ಕರಿಸಲ್ಪಟ್ಟರೆ ಅದಕ್ಕೆ ಆರ್ ಎನ್ ಐ ಹೊಣೆಯಾಗುವುದಿಲ್ಲ.

ಜಿ) ಪತ್ರಿಕಾ ಮತ್ತು ಪುಸ್ತಕಗಳ ನೋಂದಣಿ ಕಾಯ್ದೆ 1867ರ ಸೆಕ್ಷನ್ 1 ರಲ್ಲಿ ವ್ಯಾಖ್ಯಾನಿಸಿರುವಂತೆ ಆರ್ ಎನ್ ಐ ಕೇವಲ ಪತ್ರಿಕೆಗಳ ಮತ್ತು ನಿಯತಕಾಲಿಕೆಗಳ ನೋಂದಣಿ ಮಾತ್ರ ಮಾಡುತ್ತದೆ. ಈ ಕೆಳಗಿನ ವರ್ಗದ ಅರ್ಜಿಗಳನ್ನು ಶಿರೋನಾಮೆ ಪರಿಶೀಲನೆಗಾಗಿ ಸಲ್ಲಿಸಿದರೆ ಅವುಗಳನ್ನು ಪರಿಗಣಿಸಲಾಗುವುದಿಲ್ಲ:

i) ಸುದ್ದಿ ಸಂಸ್ಥೆಗಳು
ii) ವಿಶೇಷ ಲೇಖನಗಳ ಸಂಸ್ಥೆಗಳು
iii) ಸುದ್ದಿ ವೆಬ್ ಸೈಟ್ ಗಳು
iv) ಸುದ್ದಿ ಚಾನಲ್ ಗಳು
v) ವಿದ್ಯುನ್ಮಾನ ಪ್ರಸಾರ ಆವೃತ್ತಿಗಳು, ಡಾಟ್ ಕಾಮ್, ಡಾಟ್ ಇನ್, ಇ-, ಬ್ಲಾಗ್, ಪೋರ್ಟಲ್, ಫೇಸ್ ಬುಕ್, ಟ್ವಿಟ್ಟರ್,

ಆರ್ಕುಟ್, ಲಿಂಕ್ ಡಿನ್, ಯೂಟ್ಯೂಬ್, ಯಾಹೂ, ಗೂಗಲ್, ವಿಕಿಪಿಡಿಯಾ, ವಿಕಿಲಿಕ್ಸ್ ಮತ್ತಿತರ ಪದಗಳನ್ನು ಬಳಸಿದ ಶಿರೋನಾಮೆ ಆಯ್ಕೆಗಳು

(15) ಉದ್ದೇಶಿತ ಪತ್ರಿಕೆಗಳಿಗೆ ಈ ಕೆಳಗಿನ ವರ್ಗದ ಶಿರೋನಾಮೆಗಳನ್ನು ಪರಿಗಣಿಸಲಾಗುವುದಿಲ್ಲ:

i) ಸರ್ಕಾರದ ಇಲಾಖೆಗಳು, ಸರ್ಕಾರದ ಸಂಸ್ಥೆಗಳು, ವಿದೇಶಿ ಸರ್ಕಾರಗಳು, ಅಂತಾರಾಷ್ಟ್ರೀಯ ಸಂಸ್ಥೆಗಳು ಅಂದರೆ ಯುಎನ್, ಡಬ್ಲ್ಯೂಎಚ್ಒ, ಐಎಲ್ಒ ಮತ್ತಿತರ ಹೆಸರುಗಳನ್ನು ಒಳಗೊಂಡ ಶಿರೋನಾಮೆಗಳು.

ii) ಕೇಂದ್ರ/ರಾಜ್ಯ ಸರ್ಕಾರಗಳ ಸಾರ್ವಜನಿಕ ಕಲ್ಯಾಣ ಯೋಜನೆಗಳು ಅಥವಾ ಅದರ ಸಂಸ್ಥೆಗಳು ಅಥವಾ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಶಿರೋನಾಮೆಗಳು.

iii) ಆಡ್/ಜಾಹಿರಾತು, ಕ್ಲಾಸಿಫೈಡ್, ಟೆಂಡರ್, ರಿಯಲ್ ಎಸ್ಟೇಟ್, ಕ್ಯಾಲೆಂಡರ್, ಪಂಚಾಂಗ, ಮ್ಯಾಟ್ರಿಮೋನಿಯಲ್, ಯೆಲ್ಲೋ ಪೇಜಸ್/ಪೇಜ್(ಸಾಮಾನ್ಯವಾಗಿ ಬಿಳಿ ಮತ್ತು ಗುಲಾಬಿ ಬಣ್ಣದ ಜೊತೆ ಬೆಸೆದು ಕೊಂಡಿರುವಂತಹುದು) ಗೈಡ್, ಡೈರಿ, ಜಿಸ್ಟ್, ಫ್ಯಾಕ್ಟ್ ಶೀಟ್, ಬುಲೆಟಿನ್, ಕರಪತ್ರ, ಡೈರೆಕ್ಟರಿ ಮತ್ತು ಇತರೆ ಸುದ್ದಿ/ಅಭಿಪ್ರಾಯ/ಲೇಖನ ಇತ್ಯಾದಿಗಳನ್ನು ಒಳಗೊಂಡಿಲ್ಲದ ಪ್ರಕಾಶನಗಳು.

iv) ಸಂಕ್ಷೇಪಿಸುವ ಮತ್ತು ಅಡಕನುಡಿ ಒಳಗೊಂಡ ಶಿರೋನಾಮೆಗಳು ಉದಾಹರಣೆಗೆ ಬಿ2ಬಿ, ಎ2ಝೆಡ್ ಇತ್ಯಾದಿ.

v) ಯಾವುದೇ ಚಿಹ್ನೆ ಮತ್ತು ಸಂಕೇತಗಳು, ಛಾಯಾಚಿತ್ರ, ವಿಡಿಯೋಗ್ರಾಮ್, ಹಾಲ್ ಮಾರ್ಕ್, ಲೋಗೋ, ಮೋನೋಗ್ರಾಮ್ಸ್, ಅಬ್ರಿವಿಯೇಷನ್ಸ್, ಫೋನೋಗ್ರಾಮ್ಸ್, ಇಮೋಜೀಸ್ ಇತ್ಯಾದಿಗಳನ್ನು ಹೊಂದಿರುವ ಶಿರೋನಾಮೆಗಳನ್ನು ಪ್ರಮಾಣೀಕರಿಸಲಾಗುವುದಿಲ್ಲ.

vi) ನಾನ್ ಆಲ್ಫಾ ಗಣಿತದ ಸಂಖ್ಯೆಗಳನ್ನು ಒಳಗೊಂಡ ಶಿರೋನಾಮೆಗಳು. ಅಂದರೆ ಚಿತ್ರಗಳು ಅಥವಾ ಚಿಹ್ನೆಗಳು.

vii) ಮೇಲ್ನೋಟಕ್ಕೆ ಅಸಭ್ಯ ಮತ್ತು ಅರ್ಥಹೀನವಾಗಿದೆ ಎಂಬ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ. ಶೀರ್ಷಿಕೆಗಳಲ್ಲಿ ಗಣಿತದ ಚಿಹ್ನೆಗಳಾದ +, * ಇತ್ಯಾದಿ ಯಾವುದೇ ಅಂಕಿ-ಸಂಖೆಗಳಿದ್ದರೆ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಅಲ್ಲದೆ ಸಾಪ್ತಾಹಿಕ, ವೀಕ್ಲಿ, ಸಂಧ್ಯಾ ಈವಿನಿಂಗ್, ಡೈಲಿ ದೈನಿಕ್ ನ್ಯೂಸ್ ನಂತಹ ಪದಗಳನ್ನೊಳಗೊಂಡ ಅರ್ಥರಹಿತ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ.

viii) ಧಾರ್ಮಿಕ ಗೂಡಾರ್ಥಗಳಿರುವ ಶಿರೋನಾಮೆಗಳು, ಸಾರ್ವಜನಿಕ ಭಾವನೆಗಳಿಗೆ ಘಾಸಿ ಉಂಟುಮಾಡುವ ಅಥವಾ ಧಕ್ಕೆ ತರುವ ಹಾಗೂ ಅಶ್ಲೀಲ ಸಂದೇಶ ನೀಡುವ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ.

ix) ನಕಾರಾತ್ಮಕ ಭಾವನೆ ಸೂಚಿಸುವ ಶಿರೋನಾಮೆಗಳು ಅಥವಾ ಅಪರಾಧ ಮತ್ತು ಭ್ರಷ್ಟಾಚಾರದಂತಹ ಪದಗಳನ್ನು ದುರ್ಬಳಕೆ ಮಾಡಿಕೊಂಡು ಉಪಯೋಗಿಸುವ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ.

x) ಕೇವಲ ಸಂಸ್ಥೆಗಳು/ಸೊಸೈಟಿಗಳು/ಕಂಪನಿಗಳು/ಟ್ರಸ್ಟ್ ಗಳು ಮಾತ್ರ ಉದ್ಯೋಗ/ರೋಜ್ಗಾರ್/ಕೆರಿಯರ್/ಜಾಬ್/ನೌಕರಿ ಪದಗಳನ್ನು ಬಳಸಿ ಶಿರೋನಾಮೆಗಳಿಗೆ ಅರ್ಜಿ ಸಲ್ಲಿಸಬಹುದು. ಅಂತಹ ಶಿರೋನಾಮೆಗಳನ್ನು ಸಾರ್ವಜನಿಕ ಅರ್ಜಿದಾರರಿಗೆ ಪ್ರಮಾಣೀಕರಿಸಲಾಗುವುದಿಲ್ಲ.

xi) 1950ರ "ರಾಷ್ಟ್ರೀಯ ಲಾಂಛನ ಮತ್ತು ಹೆಸರು (ಅನುಚಿತ ಬಳಕೆ ತಡೆ) ಕಾಯ್ದೆ ಉಲ್ಲಂಘಿಸಿರುವಂತಹ ಶಿರೋನಾಮೆಗಳು.

xii) ರಾಷ್ಟ್ರೀಯ ಚಿಹ್ನೆ, ರಾಷ್ಟ್ರೀಯ ಧ್ಯೇಯಕ್ಕೆ ಸಂಬಂಧಿಸಿದ ಅಥವಾ ಅದೇ ಹೆಸರಿನ ಅಥವಾ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರಗಳು/ಸ್ಥಳೀಯ ಸಂಸ್ಥೆಗಳ ಜೊತೆ ಸಂಬಂಧ ಹೊಂದಿದೆ ಎಂಬಂತೆ ತಪ್ಪು ಭಾವನೆ ಮೂಡಿಸುವಂತಹ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ.

xiii) ಆಯಾ ಇಲಾಖೆಗೆ ಸಂಬಂಧಿಸಿದುದನ್ನು ಹೊರತುಪಡಿಸಿ ದೇಶದ ಜಾರಿ ಮತ್ತು ನಿಯಂತ್ರಣ ಸಂಸ್ಥೆಗಳ ಹೆಸರುಗಳನ್ನು ಬಳಕೆ ಮಾಡುವ

ಶಿರೋನಾಮೆಗಳು ಅಂದರೆ 'ಪೊಲೀಸ್', 'ಬ್ಯೂರೋ', 'ತನಿಖಾ ಇಲಾಖೆ', 'ಗುಪ್ತಚರ', 'ಸಿಐಡಿ', 'ಸಿಬಿಐ' ಇತ್ಯಾದಿ.

xiv) ದೇಶದ ಹಾಲಿ/ಮಾಜಿ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ, ಹಾಲಿ ರಾಜ್ಯಪಾಲರು ಮತ್ತು ರಾಜ್ಯಗಳ ಮುಖ್ಯಮಂತ್ರಿಗಳ ಹೆಸರಿನಲ್ಲಿ ಪ್ರಕಾಶನ ಸಂಸ್ಥೆ ನೋಂದಾಯಿಸಿರುವ, ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ, ಭಾರತೀಯ ಮಹಾಲೆಕ್ಕಪಾಲರು ಮತ್ತು ಮುಖ್ಯ ಚುನಾವಣಾ ಆಯುಕ್ತರ ಹೆಸರುಗಳನ್ನು ಒಳಗೊಂಡಿರುವ ಶಿರೋನಾಮೆಗಳು.

xv) ರಾಷ್ಟ್ರೀಯ ನಾಯಕರ ಹೆಸರುಗಳನ್ನು ಹೊಂದಿರುವ ಅಥವಾ ಪ್ರಮುಖ ರಾಷ್ಟ್ರೀಯ ನಾಯಕರ ಹೆಸರುಗಳನ್ನು ಹೋಲುವ, ಸರ್ಕಾರದ ಮುಖ್ಯಸ್ಥರುಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರಿಗಳ ಹೆಸರುಗಳನ್ನೊಳಗೊಂಡ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ. ಆದರೆ ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯಗಳ ರಾಜಕೀಯ ಪಕ್ಷಗಳ ಸಂಬಂಧಿಸಿದ ಸಂಸ್ಥೆಗಳು ಅರ್ಜಿ ಸಲ್ಲಿಸಿದರೆ ಅಂತಹವುಗಳನ್ನು ಪರಿಗಣಿಸಲಾಗುವುದು.

xvi) **ಹಾಲಿ ನೋಂದಾಯಿಸಿರುವ ಪತ್ರಿಕೆಗಳು, ಹಾಲಿ ಇರುವ ಒಂದು ಅಥವಾ ಅದಕ್ಕಿಂತ ಎರಡು ಶಿರೋನಾಮೆಗಳನ್ನು ಸೇರಿಸಿದಂತಹ ಹೆಸರುಗಳು, ಅಥವಾ ಹಾಲಿ ಇರುವ ಶಿರೋನಾಮೆಯ ಒಂದು ಭಾಗವನ್ನು ತೆಗೆದುಕೊಂಡು ಬೇರೆ ವರ್ಗದಡಿ ಹೊಸ ಶಿರೋನಾಮೆಗಾಗಿ ಅರ್ಜಿ ಸಲ್ಲಿಸಿದರೆ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಹಾಲಿ ಇರುವ ಎರಡು ಶಿರೋನಾಮೆಗಳ ಮಧ್ಯೆ ಒಂದು ಪದ ಸೇರಿಸಿ ಅರ್ಜಿ ಸಲ್ಲಿಸಿದರೆ ಒಂದು ವೇಳೆ ಅದು ಹೆಚ್ಚಿನ ಅರ್ಥ ವ್ಯತ್ಯಾಸವಿಲ್ಲದಿದ್ದರೆ ಅದನ್ನು ಪರಿಗಣಿಸಲಾಗದು.**

xvii) ಹಾಲಿ ಇರುವ ಶಿರೋನಾಮೆಯಲ್ಲಿನ ಅದೇ ಪದಗಳನ್ನು ಪ್ರಸ್ತಾಪಿತ ಶಿರೋನಾಮೆ ಒಳಗೊಂಡಿದ್ದರೆ ಒಂದು ವೇಳೆ ಇತರೆ ಭಾಷೆ, ಪ್ರಕಾಶನದ ಜಾಗ ಮತ್ತು ಅವಧಿ ಭಿನ್ನವಾಗಿದ್ದರೂ ಸಹ.

xviii) ಹಾಲಿ ಇರುವ ಶಿರೋನಾಮೆಗಳ ಜೊತೆಗೆ ನಗರ, ಪಟ್ಟಣ, ಅವಧಿ, ಭಾಷೆ, ಉಪಸರ್ಗ (ಪ್ರಿಪೋಜಿಷನ್ಸ್) ಮತ್ತು ಗುಣವಾಚಕ (ಅಡ್ಜೆಕ್ಟಿವ್ಸ್)

ಅಥವಾ ಉಪಪದಗಳು ಉದಾಹರಣೆಗೆ(A, An, The) ಪದಗಳನ್ನು ಹಿಂದೆ ಮುಂದೆ ಇತರೆ ಅಕ್ಷರಗಳನ್ನು ಬಳಸಿದ್ದರೆ ಅವುಗಳನ್ನು ಪ್ರಮಾಣೀಕರಿಸುವುದಿಲ್ಲ. ಉದಾಹರಣೆಗೆ ದಿ ಟೈಮ್ಸ್, ಡೈಲಿ, ದೈನಿಕ್, ವೀಕ್ಲಿ, ವಿ/ವಾರ್ತಾ, ಆಜ್, ಟುಡೆ, ಟುಡೆ, ಎಕ್ಸ್ ಪ್ರೆಸ್, ನ್ಯೂಸ್, ಖಬರ್, ಸಮಾಚಾರ್, ಬುಲೆಟಿನ್, ಡೈರಿ, ಇಂಡಿಯಾ, ನ್ಯಾಷನಲ್, ರಾಷ್ಟ್ರೀಯ ಇತ್ಯಾದಿ.

xix) ಹಾಲಿ ಇರುವ ಶಿರೋನಾಮೆ ಜೊತೆಗೆ ಉದ್ದೇಶಿತ ಪ್ರಕಾಶನದ ಅವಧಿ ಅಥವಾ ಭಾಷೆಯನ್ನು ಹಿಂದೆ ಮುಂದೆ ಸೇರಿಸಿದ್ದರೆ ಅಂತಹ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ.

xx) ಸ್ಪರ್ಧಾತ್ಮಕ ಪರೀಕ್ಷೆಗಳು ಅಥವಾ ಅಧ್ಯಯನ ಸಾಮಗ್ರಿ/ಬೋಧನಾ ಸಾಮಗ್ರಿಗಳ ಪಠ್ಯವನ್ನು ಗುರಿಯಾಗಿಟ್ಟುಕೊಂಡಿರುವ ಪ್ರಕಾಶನಗಳ ಶಿರೋನಾಮೆಗಳನ್ನು ಪ್ರಮಾಣೀಕರಿಸುವುದಿಲ್ಲ.

xxi) ಹಾಲಿ ಇರುವ ಶಿರೋನಾಮೆಗಳಿಗೆ ಹೋಲುವಂತೆ ಉದ್ದೇಶಿತ ಶಿರೋನಾಮೆ ಸಮಾನ ಭಾಷಾ ಧ್ವನಿನಿರೂಪಕ(ಫೊನೊಟಿಕ್ ಸಿಮಿಲಾರಿಟಿ) ಅಂದರೆ ಉಚ್ಚರಿಸುವಾಗ ಅದೇ ಹೆಸರು ಕೇಳುವಂತಾದರೆ, ಒಂದು ವೇಳೆ ಉದ್ದೇಶಿತ ಶಿರೋನಾಮೆಯ ಸ್ಪೆಲಿಂಗ್ (ಕಾಗುಣಿತ) ಭಿನ್ನವಾಗಿದ್ದರೂ ಅವುಗಳನ್ನು ಪ್ರಮಾಣೀಕರಿಸುವುದಿಲ್ಲ.

(16) **ಅರ್ಜಿದಾರರಿಗೆ ಇತರೆ ನಿರ್ದೇಶನಗಳು/ಮಾರ್ಗದರ್ಶನದ ಅಂಶಗಳು:**

ಎ) ಮಾಲಿಕರು/ಪ್ರಕಾಶಕರು ಶಿರೋನಾಮೆಯನ್ನು **ಪ್ರಮಾಣೀಕರಿಸಿದ ಒಂದು ವರ್ಷದ ಅವಧಿಯೊಳಗೆ** ಪತ್ರಿಕೆಗಳ ನೋಂದಣಾಧಿಕಾರಿ(ಆರ್ ಎನ್ ಐ) ಅಧಿಕಾರಿಗಳ ಕಚೇರಿಯಿಂದ ಶಿರೋನಾಮೆಯ ನೋಂದಣಿಯನ್ನು ಪಡೆದುಕೊಳ್ಳತಕ್ಕದ್ದು. ಒಂದು ವೇಳೆ ಪ್ರಮಾಣೀಕರಿಸಿದ ಶಿರೋನಾಮೆಯನ್ನು ಒಂದು ವರ್ಷದೊಳಗೆ ನೋಂದಾಯಿಸದಿದ್ದರೆ ಅದನ್ನು ನಿರ್ಬಂಧಿಸಲಾಗುವುದು (ಡಿ ಬ್ಲಾಕ್ ಮಾಡಲಾಗುವುದು) ಮತ್ತು ಅದು ಇತರೆ ಅರ್ಜಿದಾರರಿಗೆ ಲಭ್ಯವಿರುತ್ತದೆ.

ಬಿ) ಶಿರೋನಾಮೆಯ ಅರ್ಜಿ ಪರಿಶೀಲನೆ ಪ್ರಕ್ರಿಯೆ ವೇಳೆ ಅದಕ್ಕೆ ಸಂಬಂಧಿಸಿದಂತೆ ಅರ್ಜಿದಾರರಿಗೆ ನ್ಯೂನತೆ ಪತ್ರ(ಡಿ/ಎಲ್)ವನ್ನು ವಿತರಿಸಿದರೆ ಅರ್ಜಿದಾರರು ಅಂತಹ ಪತ್ರ ವಿತರಿಸಿದ ೬೦ ದಿನಗಳೊಳಗೆ ಉತ್ತರಿಸಬೇಕು. ನಿಗದಿತ ಅವಧಿಯಲ್ಲಿ ಉತ್ತರ ಲಭ್ಯವಾಗದಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅಂತಹ ಪ್ರಕರಣಗಳಲ್ಲಿ ಹೊಸ ಶಿರೋನಾಮೆಗಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಂದ ಅನುಮೋದಿಸಲ್ಪಟ್ಟ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.

ಸಿ) ನ್ಯೂನತಾ ಪತ್ರಗಳು ಆರ್ ಎನ್ ಐ ವೆಬ್ ಸೈಟ್ ನಲ್ಲಿ ಲಭ್ಯವಿದೆ. ನ್ಯೂನತಾ ಪತ್ರಗಳನ್ನು ಸ್ವೀಕರಿಸದಿದ್ದರೆ ಅದು ಉತ್ತರ ಸಲ್ಲಿಸಲು ವಿಳಂಬವಾಗಿದೆ ಎಂಬುದಕ್ಕೆ ಕಾರಣವನ್ನಾಗಿ ಪರಿಗಣಿಸುವುದಿಲ್ಲ.

ಡಿ) ಅರ್ಜಿದಾರರು ತಾವು ಹಿಂದೆ ಮಾಲಿಕತ್ವ ಹೊಂದಿದ್ದ ಶಿರೋನಾಮೆ ನಿರ್ಬಂಧಿಸಲ್ಪಟ್ಟಿದ್ದರೆ(ಡಿ ಬ್ಲಾಕ್) ಅದರ ಮೇಲೆ ಹಕ್ಕು ಮಂಡಿಸುವಂತಿಲ್ಲ. ನಿರ್ಬಂಧಿಸಿರುವ ಶಿರೋನಾಮೆಗಳ ಪ್ರಮಾಣೀಕರಣಕ್ಕೆ ಯಾವುದೇ ಅಭ್ಯರ್ಥಿ ಅರ್ಜಿ ಸಲ್ಲಿಸಿದರೆ ಅವುಗಳು ಪ್ರಸ್ತುತ ಮಾರ್ಗಸೂಚಿ ಮತ್ತು ನಿಯಮಗಳಿಗೆ ಒಳಪಟ್ಟಿರುತ್ತವೆ.

ಇ) ಒಮ್ಮೆ ಅರ್ಜಿ ತಿರಸ್ಕರಿಸಲ್ಪಟ್ಟರೆ ಅರ್ಜಿದಾರರು ಶಿಫಾರಸ್ಸು ಮಾಡಲ್ಪಡುವ ಪ್ರಾಧಿಕಾರದ ಮೂಲಕ ಮತ್ತೆ ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಶಿಫಾರಸ್ಸು ಮಾಡಲ್ಪಡುವ ಪ್ರಾಧಿಕಾರದ ಸೂಕ್ತ ಅನುಮೋದನೆ ಇಲ್ಲದೆ, ಅರ್ಜಿದಾರರು ಸಲ್ಲಿಸುವ ಯಾವುದೇ ಶಿರೋನಾಮೆಯ ಆಯ್ಕೆ ಅರ್ಜಿಗಳನ್ನು ಆರ್ ಎನ್ ಐ ನೇರವಾಗಿ ಪುರಸ್ಕರಿಸುವುದಿಲ್ಲ.

ಎಫ್) ಒಂದು ವೇಳೆ ಪ್ರಮಾಣೀಕರಿಸಿದ ಶಿರೋನಾಮೆಯ ನೋಂದಣಿಯಾಗಿರದಿದ್ದರೆ ಲಿಖಿತ ರೂಪದಲ್ಲಿ ಕಾರಣಗಳನ್ನು ದಾಖಲಿಸಿ, ಅಂತಹ ಶಿರೋನಾಮೆಗಳನ್ನು ರದ್ದು ಮಾಡುವ ಅಧಿಕಾರ ಪತ್ರಿಕಾ ನಿಬಂಧಕರಿಗೆ ಇರುತ್ತದೆ.

ಜಿ) ಅರ್ಜಿದಾರರು ಶಿರೋನಾಮೆ ಪ್ರಮಾಣೀಕರಣಕ್ಕೆ ಅರ್ಜಿ ಸಲ್ಲಿಸುವಾಗ ಯಾವುದೇ ರೀತಿಯ ನಿಯಮಾವಳಿಗಳಲ್ಲಿನ ವಿಳಂಬ ಮತ್ತು ತಿರಸ್ಕಾರಗಳನ್ನು ತಪ್ಪಿಸಿಕೊಳ್ಳಲು ಕಟ್ಟುನಿಟ್ಟಾಗಿ ಮಾರ್ಗಸೂಚಿಗಳನ್ನು ಪಾಲನೆ ಮಾಡುವಂತೆ ಸೂಚಿಸಲಾಗಿದೆ.

ಎಚ್) ಒಂದು ವೇಳೆ ಒಂದೇ ಬಗೆಯ ಅಥವಾ ಅದೇ ರೀತಿಯಲ್ಲಿ ವ್ಯಾಖ್ಯಾನಿಸುವುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಸಂದೇಹಗಳಿದ್ದರೆ ಅಂತಹ ಸಂದರ್ಭಗಳಲ್ಲಿ ಪತ್ರಿಕಾ ನಿಬಂಧಕರ ನಿರ್ಧಾರವೇ ಅಂತಿಮ.

ಐ) ವ್ಯಕ್ತಿಗಳ ಹೆಸರಿನಲ್ಲಿ ಜರ್ನಲ್ ಗಳ ಪ್ರಕಾಶನದ ಶಿರೋನಾಮೆಗಳನ್ನು ಪ್ರತ್ಯೇಕ ಪ್ರಮಾಣೀಕರಿಸಲಾಗುವುದಿಲ್ಲ. ಜರ್ನಲ್ ಗಳನ್ನು ಕೇವಲ ಸಂಸ್ಥೆಗಳು, ಕೇಂದ್ರಗಳು, ಸೊಸೈಟಿಗಳು ಇತ್ಯಾದಿಗಳ ಹೆಸರಿನಲ್ಲಿ ಮಾತ್ರ ಪ್ರಮಾಣೀಕರಿಸಲಾಗುವುದು. ಅಂತಹ ಪ್ರಕರಣಗಳಲ್ಲಿ ಅಂತಹ ಸಂಸ್ಥೆ, ಕೇಂದ್ರ ಅಥವಾ ಕಂಪನಿ ಶಿರೋನಾಮೆಯ ಪೂರ್ವದಲ್ಲಿ ತನ್ನ ಹೆಸರನ್ನು ಸೇರಿಸಬೇಕು, ಆಗ ಒಂದೇ ಬಗೆಯ/ಒಂದೇ ವಿಷಯಗಳ ಕುರಿತ ನಾನಾ ಜರ್ನಲ್ ಗಳನ್ನು ಸ್ಪಷ್ಟವಾಗಿ ಪ್ರತ್ಯೇಕಿಸಲು ಸಾಧ್ಯವಾಗಲಿದೆ.

ಜೆ) ಒಂದು ವೇಳೆ ಪ್ರಮಾಣೀಕರಿಸಿದ ಶಿರೋನಾಮೆ ನೋಂದಣಿಗೂ ಮುನ್ನ ಪ್ರಕಾಶನ ಮಾಡುವ ವಿಷಯ, ಸುದ್ದಿ ಮತ್ತು ಸಾರ್ವಜನಿಕ ಸುದ್ದಿ ಕುರಿತ ಟೀಕೆ ವರ್ಗಕ್ಕೆ ಒಳಪಡದಿದ್ದರೆ ಅಥವಾ ಅರ್ಜಿ ಸಲ್ಲಿಸುವಾಗ ಉಲ್ಲೇಖಿಸಿದ್ದ ರೂಪುರೇಷೆ ಮತ್ತು ವಸ್ತು ವಿಷಯಕ್ಕೆ ಹೊಂದಿಕೊಳ್ಳದಿದ್ದರೆ ಅಂತಹ ಸಂದರ್ಭದಲ್ಲಿ ಶಿರೋನಾಮೆ ನೋಂದಣಿಗೂ ಮುನ್ನ ರದ್ದುಗೊಳಿಸುವ ಅಧಿಕಾರವಿದೆ.

ಕೆ) ಉದ್ದೇಶಿತ ಪತ್ರಿಕೆ/ಪ್ರಕಾಶನವನ್ನು ಸರ್ಕಾರದ ಇಲಾಖೆ/ಸಂಸ್ಥೆ ಹೊರತರಲು ಬಯಸಿದ್ದರೆ ಅಂತಹ ಸಂದರ್ಭದಲ್ಲಿ ಶಿರೋನಾಮೆ ನೋಂದಣಿಗಾಗಿ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ಅರ್ಜಿ ಸಲ್ಲಿಸಬೇಕು ಮತ್ತು ಶಿರೋನಾಮೆ ಅವರ ಹೆಸರಿನಲ್ಲಿ ಮಾತ್ರ ಪ್ರಮಾಣೀಕರಿಸಲ್ಪಡುತ್ತದೆ.

(17). **ಸ್ಪಷ್ಟನೆ(ಡಿಸ್ಕ್ಲೈಮರ್):** ಉದ್ದೇಶಿತ ಪತ್ರಿಕೆ/ನಿಯತ ಕಾಲಿಕದ ಶಿರೋನಾಮೆಯ ಪ್ರಮಾಣೀಕರಣ ಪಿ ಆರ್ ಬಿ ಕಾಯ್ದೆ 1867ರ ಅಡಿಯಲ್ಲಿ ಆ ಪತ್ರಿಕೆಯ ನೋಂದಣಿ ಉದ್ದೇಶಕ್ಕೆ ಮಾತ್ರವೇ ಆಗಿರುತ್ತದೆ. ಅದರ ಅರ್ಥ ಶಿರೋನಾಮೆಯ ಅನುಮೋದನೆ, ಟ್ರೇಡ್ ಮಾರ್ಕ್/ಬ್ರಾಂಡ್ ಹೆಸರು/ಕಂಪನಿ ಹೆಸರು ಇತ್ಯಾದಿಗಳಿಗೆ ಅನುಮೋದನೆಯಲ್ಲ. ಅವುಗಳಿಗೆ ಟ್ರೇಡ್ ಮಾರ್ಕ್ ಕಾಯ್ದೆ, ಕಂಪನಿಗಳ ಕಾಯ್ದೆ ಸೇರಿದಂತೆ ಇತರೆ ಸೂಕ್ತ ಕಾಯ್ದೆಗಳ ಅಂಶಗಳನ್ನಾಧರಿಸಿ ಅರ್ಜಿದಾರರು ಸೂಕ್ತ ಪ್ರಾಧಿಕಾರಗಳ ಮುಂದೆ ಅರ್ಜಿಗಳನ್ನು ಸಲ್ಲಿಸಿ, ಅಗತ್ಯ ಅನುಮೋದನೆಗಳನ್ನು ಪಡೆದುಕೊಳ್ಳಬೇಕು. **ಇದಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವಿದ್ದರೆ ಅದು ಸಂಬಂಧಿಸಿದ ಎರಡು ಪಕ್ಷಗಳ ನಡುವಿನ ವಿವಾದದ ವಿಷಯ ಎಂದು ಪರಿಗಣಿಸಲಾಗುವುದು ಮತ್ತು ಯಾವುದೇ ರೀತಿಯಲ್ಲೂ ಭಾರತೀಯ ಪತ್ರಿಕೆಗಳ ನೋಂದಣಾಧಿಕಾರಿ (ಆರ್ ಎನ್ ಐ) ಭಾಗಿದಾರನಾಗುವುದಿಲ್ಲ.**

******